31.	ಭದ್ರಾ ಆಣೆಕಟ್ಟು ಆಧುನೀಕರಣ	1.00
32.	ಹರಿ ನಾಲಾ	15.00
33.	ದಂಡವತಿ	37.00
	ಒಟ್ಟು ಕೃಷ್ಣ ಕೊಳ್ಳ	4135.64

ಮಂಚನಬೆಲೆ ಆಣೆಕಟ್ಟೆಯಿಂದಾಗಿ ಜಮೀನು ಕಳೆದುಕೊಂಡವರಿಗೆ ಪುನರ್ ವಸತಿ

1212 (522): ಶ್ರೀ ಅಂಜನಮೂರ್ತಿ (ನೆಲಮಂಗಲ):-

ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಂಚನಬೆಲೆ ಆಣೆಕಟ್ಟು ಯೋಜನೆಯಲ್ಲಿ ಭೂಸ್ವಾಧೀನ ಮಾಡಿಕೊಂಡಿರುವ ಭೂ ವಿಸ್ತೀರ್ಣವೆಷ್ಟು;

ಆ) ಈ ಯೋಜನೆ ಅಡಿಯಲ್ಲಿ ಜಮೀನು ಕಳೆದುಕೊಂಡ ಕುಟುಂಬಗಳಿಗೆ, ಅದರಲ್ಲೂ ಮುಖ್ಯವಾಗಿ ದಾಸನಪುರ ಹೋಬಳಿಯ ಕಡಬಗೆರೆ ಗ್ರಾಮದ ಎಷ್ಟು ಕುಟುಂಬಗಳಿಗೆ ಪುನರ್ವಸತಿ ಮತ್ತು ಜಮೀನು ಪರಿಹಾರವನ್ನು ನೀಡಲಾಗಿದೆ. (ಪೂರ್ಣ ವಿವರಗಳನ್ನು ನೀಡುವುದು) ?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):-

ಅ) 248 ಹೆಕ್ಟೇರುಗಳು

ಆ) ಈ ಯೋಜನೆ ಅಡಿಯಲ್ಲಿ ಒಟ್ಟು 190 ಕುಟುಂಬಗಳು ಜಮೀನು ಕಳೆದುಕೊಂಡಿದ್ದು, ಅದರಲ್ಲಿ ವೀರಾಪುರದ 40 ಕುಟುಂಬದವರನ್ನು ಕಡಬಗೆರೆಗೆ ಸ್ಥಳಾಂತರಿಸಿ ಪುನರ್ವಸತಿ ಕಲ್ಪಿಸಲಾಗಿದೆ. ಜಮೀನು ಕಳೆದುಕೊಂಡವರೆಲ್ಲರಿಗೂ ಜಮೀನು ಪರಿಹಾರ ಕೊಡಲಾಗಿದೆ.

ಕುಮುದ್ವತಿ ನದಿಗೆ ಅಡ್ಡಲಾಗಿ ಮೋರಿಗಳ ನಿರ್ಮಾಣ

1213 (528): ಶ್ರೀ ಅಂಜನಮೂರ್ತಿ (ನೆಲಮಂಗಲ):-

ಮಾನ್ಯ ಲೋಕೋಪಯೋಗಿ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನೆಲಮಂಗಲ ತಾಲ್ಲೂಕಿನ ಅಗಲಕುಪ್ಪೆ ಹೊಸಹಳ್ಳಿ ಹನುಮಂತೇಗೌಡನ ಪಾಳ್ಯ, ಚಿಕ್ಕಮಾರನ ಹಳ್ಳಿಗಳ ಸಮೀಪ ಕುಮುದ್ವತಿ ನದಿಗೆ ಅಡ್ಡಲಾಗಿ ಮೋರಿಗಳನ್ನು ನಿರ್ಮಿಸಬೇಕೆಂದು ಮನವಿಗಳೇನಾದರೂ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):-

ಅ) ಹೌದು.

ಆ) ಅಗಲಕುಪ್ಪೆ ಹೊಸಹಳ್ಳಿ ನಡುವೆ ಕುಮುದ್ವತಿ ನದಿಗೆ ಅಡ್ಡಲಾಗಿ ಬರುವ ಸೇತುವೆಗೆ ಸರ್ಕಾರದಿಂದ ದಿನಾಂಕ 12-1-1993ರಂದು ರೂ. 14.00 ಲಕ್ಷಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ಹನುಮಂತೇ ಗೌಡನಪಾಳ್ಯ ಚಿಕ್ಕಮಾರನಹಳ್ಳಿ ನಡುವೆ ಕುಮುದ್ವತಿ ನದಿಗೆ ಅಡ್ಡಲಾಗಿ ಬರುವ ಸೇತುವೆಯ ಕಾಮಗಾರಿಯನ್ನು ಆಯ-ವ್ಯಯದಲ್ಲಿ ಹಣದ ಲಭ್ಯತೆಯನ್ನು ಅನುಸರಿಸಿ ಮುಂದಿನ ಕ್ರಮ ತೆಗೆದುಕೊಳ್ಳಲು ಪರಿಶೀಲಿಸಲಾಗುತ್ತಿದೆ.

ನೆಲಮಂಗಲ ತಾಲ್ಲೂಕಿನಲ್ಲಿ ಮೇಲ್ದರ್ಜೆಗೇರಿಸಿದ ರಸ್ತೆಗಳ ದುಸ್ಥಿತಿ

1214 (529): ಶ್ರೀ ಅಂಜನಮೂರ್ತಿ (ನೆಲಮಂಗಲ):-

ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) 1991-92ನೇ ಸಾಲಿನಲ್ಲಿ ನೆಲಮಂಗಲ ತಾಲ್ಲೂಕಿನಲ್ಲಿ ಮೇಲ್ದರ್ಜೆಗೇರಿಸಿದ ರಸ್ತೆಗಳು ಸಂಚಾರಕ್ಕೆ ಯೋಗ್ಯವಾಗಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ರಸ್ತೆಗಳನ್ನು ಅಭಿವೃದ್ಧಿಪಡಿಸದಿರಲು ಕಾರಣಗಳೇನು;

ಇ) ಈ ಬಗ್ಗೆ ಸರ್ಕಾರದವರು ಕೂಡಲೇ ಕ್ರಮ ಕೈಗೊಳ್ಳುವರೇ ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):-

ಅ) ಇತ್ತೀಚೆಗೆ ಮೇಲ್ದರ್ಜೆಗೇರಿಸಿದ ರಸ್ತೆಗಳು ಕೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) 1992-93ನೇ ಸಾಲಿನಲ್ಲಿ ಮೇಲ್ದರ್ಜೆಗೇರಿಸಿದ ರಸ್ತೆಗಳ ಅಭಿವೃದ್ಧಿಗಾಗಿ ಅನುದಾನ ಲಭ್ಯತೆ ಇರಲಿಲ್ಲ. ಈ ರಸ್ತೆಗಳ ಅಭಿವೃದ್ಧಿಯನ್ನು ಅನುದಾನದ ಲಭ್ಯತೆ ಅನುಸರಿಸಿ ಹಂತಹಂತವಾಗಿ 1993-94ನೇ ಸಾಲಿನಿಂದ ತೆಗೆದುಕೊಳ್ಳಲಾಗುವುದು.

ಇ) ಅತ್ಯಂತ ಕೆಟ್ಟುಹೋದ ಭಾಗಗಳನ್ನು ಲಭ್ಯವಿದ್ದ ನಿರ್ವಹಣಾ ಅನುದಾನದಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ದುರಸ್ತಿಪಡಿಸಲಾಗುತ್ತಿದೆ.

ಕೇಂದ್ರದಿಂದ ಮಂಜೂರಾತಿಯಾಗಿರುವ ರಾಜ್ಯದ ರಾಷ್ಟ್ರೀಯ ಹೆದ್ದಾರಿಗಳು

1217 (50): ಶ್ರೀ ಹರ್ಷಕುಮಾರಗೌಡ (ಚಾಮರಾಜ):-

ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಈವರೆಗೆ ಕೇಂದ್ರದಿಂದ ರಾಜ್ಯಕ್ಕೆ ಮಂಜೂರಾಗಿರುವ ರಾಷ್ಟ್ರೀಯ ಹೆದ್ದಾರಿಗಳೆಷ್ಟು ಮತ್ತು ಅವುಗಳ ಹೆಸರೇನು;

ಆ) ರಾಜ್ಯ ಸರ್ಕಾರದಿಂದ ಕೋರಿಕೆ ಸಲ್ಲಿಸಲಾಗಿರುವ ನೂತನ ರಾಷ್ಟ್ರೀಯ ಹೆದ್ದಾರಿಗಳ ಹೆಸರುಗಳೇನು;

ಇ) ಅವುಗಳ ಕಾರ್ಯ ಈಗ ಯಾವ ಹಂತದಲ್ಲಿದೆ ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):-

ಅ) ಕರ್ನಾಟಕ ರಾಜ್ಯದಲ್ಲಿ 7 ರಾಷ್ಟ್ರೀಯ ಹೆದ್ದಾರಿಗಳು ಹಾದು ಹೋಗುತ್ತವೆ. ಇವುಗಳ ಹೆಸರಿನ ಪಟ್ಟಿಯನ್ನು (ಅಡಕ - 1) ಲಗತ್ತಿಸಲಾಗಿದೆ.

ಆ) ಪಟ್ಟಿಯನ್ನು (ಅಡಕ - 2) ಲಗತ್ತಿಸಲಾಗಿದೆ.